**ದಿನಾಂಕ 03.11.2022ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದಃ-**

2. ನಾನು ಕೆ.ಆರ್.ಪೇಟೆಯ ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ಖಾಯಂ ನೌಕರಿ ಮಾಡು ತ್ತಿದ್ದೇನೆ. ನಾನು ಪ್ರತಿದಿನ ಕರ್ತವ್ಯಕ್ಕೆ ಮೈಸೂರಿನಿಂದ ಹೋಗಿ ಬರುತ್ತೇನೆ. ನಾನು ಮೂರು ಪಾಳಿಯಲ್ಲಿ ಕೆಲಸ ಮಾಡುತ್ತೇನೆ. ಮೃತ ಪವಿತ್ರಾಕುಮಾರಿ ನಮ್ಮ ಜಾತಿಗೆ ಸೇರಿದ್ದಳು ಮತ್ತು ಪಕ್ಕದ ಮನೆಯಲ್ಲಿ ವಾಸ ಇದ್ದಳು. ಆದರಿಂದ ಪರಿಚಯ. ನನ್ನ ಮನೆ ಪುಲಕೇಶಿ ರಸ್ತೆಯಲ್ಲಿದೆ. ಮೃತಳು ವೆಸ್ಲಿ ರಸ್ತೆಯಲ್ಲಿನ ಮನೆಯಲ್ಲಿದ್ದಳು. ಇವು ಎರಡು ರಸ್ತೆ ಬೇರೆ ಬೇರೆ ಇರುತ್ತವೆ. ನಮ್ಮ ಮನೆಯಿಂದ ನೇರವಾಗಿ ಮೃತಳು ವಾಸ ಇದ್ದ ಮನೆಯನ್ನು ನೋಡಲು ಆಗುವುದಿಲ್ಲ. ಆರೋಪಿ ಮೃತಳಿಗೆ ಸಾಲ ಕೊಟ್ಟಿದ್ದುದ್ದನ್ನು ನಾನು ನೋಡಿರಲಿಲ್ಲ. ಮೃತಳ ಮನೆಯ ಬಳಿ ಗಲಾಟೆ ಆಗುವಾಗ ಈ ವಿಚಾರ ನನಗೆ ತಿಳಿದಿತ್ತು. ದಿನಾಂಕ 07.06.2015ರಂದು ಗಲಾಟೆ ಆಗಿತ್ತು. ನಾನು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಮೂರನೇ ಬಾರಿ ಬರುತ್ತಿದ್ದೇನೆ. ನ್ಯಾಯಾಲಯಕ್ಕೆ ಬರುವಂತೆ ಪೊಲೀಸರು ನೋಟೀಸು ಕೊಟ್ಟಿದ್ದರು.

3. ಗಲಾಟೆ ಸಮಯದಲ್ಲಿ ಯಾರೂ ಜನ ಸೇರಿರಲಿಲ್ಲ. ಮತ್ತೆ ಹೇಳುತ್ತೇನೆ 8-10 ಜನ ಸೇರಿದ್ದರು. ಅವರ ಹೆಸರು ಗೊತ್ತಿಲ್ಲ. ದಿನಾಂಕ 07.06.2015 ಯಾವ ದಿನ ಆಗಿತ್ತು ಎನ್ನುವುದು ಗೊತ್ತಿಲ್ಲ. ಅವತ್ತು ಕರ್ತವ್ಯಕ್ಕೆ ಎಷ್ಟು ಗಂಟೆಗೆ ಹೋಗಿದ್ದೆ ಎನ್ನುವುದು ನೆನಪಿಲ್ಲ. ಆ ದಿನ ನಾನು ರಜಾ ಹಾಕಿದ್ದೆ ಎನ್ನುವ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ. ಮೃತಳು ವಿಷ ಕುಡಿದ ದಿನವೇ ಮೃತಪಟ್ಟಿರುತ್ತಾಳೆ. ಆ ದಿನ ದಿನಾಂಕ 11.06.2015 ಆಗಿತ್ತು. ಈ ನಡುವೆ ನಾನು ಮೃತಳನ್ನು ಭೇಟಿ ಮಾಡಿ ಸಾಲದ ವಿಚಾರವಾಗಿ ಯಾವುದೇ ಮಾತುಕತೆ ಆಡಿರಲಿಲ್ಲ. ಆರೋಪಿ ಗಲಾಟೆ ಮಾಡಿದ್ದ ಬಗ್ಗೆ ಪೊಲೀಸರಿಗೆ ದೂರು ಕೊಡಲು ನಾನು ಮೃತಳಿಗೆ ತಿಳಿಸಿದ್ದೆ. ಆಕೆ ದೂರು ಕೊಟ್ಟಳೆ ಎನ್ನುವುದು ಗೊತ್ತಿಲ್ಲ.

4. ಪೊಲೀಸರು ನನ್ನನ್ನು ಯಾವ ದಿನ ಕರೆಸಿದ್ದರು ಎನ್ನುವುದು ನೆನಪಿಲ್ಲ. ಪೊಲೀಸರು ನನ್ನನ್ನು ಖುದ್ದಾಗಿ ವಿಚಾರಣೆ ಮಾಡಿಲ್ಲ ಮತ್ತು ಹೇಳಿಕೆಯನ್ನು ಪಡೆದುಕೊಂಡಿಲ್ಲ. ಪೊಲೀಸರು ನನಗೆ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಮೃತಳ

ಮನೆಯ ಬಳಿ ಹೋಗಿಲ್ಲ ಎನ್ನುವುದು, ಅಲ್ಲಿ ಯಾವುದೇ ಗಲಾಟೆ ಮಡಿರಲಿಲ್ಲ ಎನ್ನುವುದು, ನಾನು ಯಾವುದೇ ಗಲಾಟೆಯನ್ನು ನೋಡಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ನಮ್ಮ ಜಾತಿಗೆ ಸೇರಿಲ್ಲ, ಮೃತಳು ನಮ್ಮ ಜಾತಿಯವರಿರುವುದರಿಂದ ಅವರ ಮನೆಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07.06.2015ರಂದು ನಾನು ಕರ್ತವ್ಯಕ್ಕೆ ಹೋಗಿದ್ದೆ ಎನ್ನುವುದು, ಆದರಿಂದ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ, ಸಾಕ್ಷಿ ಯಾವುದೇ ಉತ್ತರ ಕೊಟ್ಟಿಲ್ಲ.

ಮರು ವಿಚಾರಣೆಃ ಇಲ್ಲ

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**03.11.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.